**ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ**

**ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ**

**ಎಸ್.ಸಿ.ಸಂಖ್ಯೆ** 10047/2025

| | |
|---|---|
| ಹೆಸರುಃ | ಪರಶುರಾಮ ಮೇತ್ರಿ |
| ತಂದೆಯ ಹೆಸರುಃ | ವಸಂತ |
| ವಯಸ್ಸುಃ | 40 ವರ್ಷ |
| ಉದ್ಯೋಗಃ | ಖಾಸಗಿ ಕೆಲಸ |
| ವಾಸಃ | ಮುಧೋಳ |

**ಸಾಕ್ಷಿಯನ್ನು ದಿಃ 05.12.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ-**

1. ನನಗೆ ಚಾಸಾ-1, 4 ಹಾಗೂ 5 ಇವರ ಪರಿಚಯ ಇಲ್ಲ. ನನಗೆ ಆರೋಪಿತರ ಪರಿಚಯ ಇಲ್ಲ. ಅವರ ನಡುವಿನ ಜಗಳ ಗೊತ್ತಿಲ್ಲ. ನಾನು ಜಗಳ ನೋಡಿಲ್ಲ, ಬಿಡಿಸಿಲ್ಲ, ನಾನು ಈ ಬಗ್ಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಸಾಕಿಃದಾರರನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಲು ಮನವಿ ಮಾಡಿದ್ದು, ಸಾಕ್ಷಿದಾರರು ಪೂರ್ಣ ಪ್ರತಿಕೂಲ ಪ್ರವೃತ್ತಿ ತೋರಿಸಿರುವುದರಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಸರಕಾರಿ ಅಭಿಯೋಜಕರಿಗೆ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)**

**ಎಸ್.ಸಿ.ಸಂಖ್ಯೆಃ 10047/2025**
**ಪ್ರಾ.ಸಾ.ಸಂಖ್ಯೆಃ 02**
**ಚಾ.ಸಾ.ಸಂಖ್ಯೆಃ 07**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ–**

1. ಚಾಸಾ–1, 4 ಹಾಗೂ 5 ನಮ್ಮ ಓಣಿಯವರು ಇದ್ದು ಅವರ ಪರಿಚಯ ಇದೆ ಎಂದರೆ ಸರಿಯಲ್ಲ. ದಿನಾಂಕಃ 27.02.2021 ರಂದು ಮದ್ಯಾಹ್ನ 02.00 ಗಂಟೆಗೆ ನಾನು ಹಾಗೂ ಚಾಸಾ–6 ಬಟಕುರ್ಕಿ ದುರ್ಗಮ್ಮ ದೇವಸ್ಥಾನದ ಹತ್ತಿರ ಈಗ ನ್ಯಾಯಾಲಯದ ಮುಂದಿರುವ ಆರೋಪಿತರು ಚಾಸಾ–1 ಇವರ ಮನೆಗೆ ಅತಿಕ್ರಮ ಪ್ರವೇಶ ಮಾಡಿ ಜಗಳ ಮಾಡಿದರು ಎಂದರೆ ಸರಿಯಲ್ಲ. ನಾವು ಅಲ್ಲಿಗೆ ಹೋಗಿ ನೋಡಿದಾಗ ಆರೋಪಿತರೆಲ್ಲರೂ ಚಾಸಾ–4 ಇವಳಿಗೆ ಬೋಸಡಿ ಅಂತಾ ಬೈಯ್ದು ಅವನನ್ನು ಒಂದು ಕೈ ನೋಡಿಕೊಳ್ಳುತ್ತೇವೆ ಅಂತಾ ಬೈಯ್ದರು ಎಂದರೆ ಸರಿಯಲ್ಲ.

2. ಚಾಸಾ–4 ಈ ಬಗ್ಗೆ ತಕರಾರು ಮಾಡಿದಾಗ ಆರೋಪಿತರು ಅವಳಿಗೆ ಬೋಸಡಿ ಅಂತಾ ಬೈಯ್ದು, ಅವಳನ್ನು ಕೆಳಕ್ಕೆ ಕೆಡವಿ ಒದ್ದರು ಅಂತಾ, ಚಾಸಾ–1 ಜಗಳ ಬಿಡಿಸಲು ಬಂದಿದ್ದು ಆಗ ಆರೋಪಿ 1 ಚಾಸಾ–1 ಇವರಿಗೆ ಬೋಸಡಿ ಮಗನೇ ಅಂತಾ ಬೈಯ್ದು ಕೈಗಳಿಂದ ಹೊಡೆದ ಎಂದರೆ ಸರಿಯಲ್ಲ. ಆರೋಪಿ 3 ಹಾಗೂ 4 ಸಹ ಕೈಗಳಿಂದ ಹೊಡೆದರು, ಆರೋಪಿ 2 ಬಡಿಗೆಯಿಂದ ಚಾಸಾ–1 ಇವರಿಗೆ ಮೈಕೈಗೆ ಹೊಡೆದರು ಎಂದರೆ ಸರಿಯಲ್ಲ.

3. ಆರೋಪಿ 1 ಗಣೇಶ ಚಾಸಾ–4 ಇವರ ಸೀರೆ ಹಿಡಿದು ಎಳೆದಾಡಿದ, ಕುತ್ತಿಗೆ ಹಿಚುಕಿ ಕೊಲೆ ಮಾಡಲು ಪ್ರಯತ್ನಿಸಿದ ಎಂದರೆ ಸರಿಯಲ್ಲ. ನಾನು,

ಚಾಸಾ–5 ಹಾಗೂ 6 ಜಗಳ ಬಿಡಿಸಿದೆವು ಎಂದರೆ ಸರಿಯಲ್ಲ. ಆರೋಪಿ 2 ಕಾಳಪ್ಪ ಬಡಿಗೆಯನ್ನು ತೋರಿಸಿ ಜೀವ ಬೆದರಿಕೆ ಹಾಕಿದ ಎಂದರೆ ಸರಿಯಲ್ಲ.

4. ನಾನು ಚಾಸಾ–1 ಇವನನ್ನು ವಿಚಾರಿಸಿದಾಗ ಹಣಕಾಸಿನ ವಿಚಾರವಾಗಿ ಆರೋಪಿತರು ಅವರ ಮೇಲೆ ಹಲ್ಲೆ ಮಾಡಿದ್ದಾರೆ ಅಂತಾ ತಿಳಿದು ಬಂತು ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಈಗ ಓದಿ ಹೇಳಲಾದ ರೀತಿಯಲ್ಲಿ ಅಂದರೆ "ನಿನ್ನೆಯ ದಿವಸ ದಿನಾಂಕಃ 22.07.2022 ರಂದ ........... ಈಗ ತಮ್ಮಿಂದ ಕೇಳಿ ಗೊತ್ತಾಯಿತು." ಅಂತಾ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. (ಸದರಿ ಹೇಳಿಕೆಯ ಭಾಗವನ್ನು ನಿಪಿ–7 ಅಂತಾ ಗುರುತಿಸಲಾಯಿತು.)

5. ಘಟನೆಯನ್ನು ನೋಡಿ, ಜಗಳ ಬಿಡಿಸಿ, ನಿಪಿ–7 ರಂತೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಪಾಟೀ ಸವಾಲು ಇರುವುದಿಲ್ಲ.

**ಎಸ್.ಸಿ.ಸಂಖ್ಯೆ: 10047/2025**
**ಪ್ರಾ.ಸಾ.ಸಂಖ್ಯೆ: 02**
**ಚಾ.ಸಾ.ಸಂಖ್ಯೆ: 07**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ. ಸರಿ ಅದೆ.**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**